**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3032/2021**
**ಚಾಸಾ - 02 / ಪ್ರಾಸಾ - 02**

| | |
|---|---|
| ಹೆಸರು | ಗಿರಿಯಪ್ಪ |
| ತಂದೆಯ ಹೆಸರು | **ಗೋವಿಂದಯ್ಯ** |
| ವಯಸ್ಸು | **85** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಮೇಟಿ ಪಾಳ್ಯ** |

**ದಿನಾಂಕಃ20-03-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ರವರು ನನ್ನ ಮಗ. ಚಾಸಾ-3 ರವರು ನನ್ನ ಹೆಂಡತಿ. ಆರೋಪಿಗಳು ನನ್ನ ಸಂಬಂಧಿಕರು. ನನಗೆ ಈ ಪ್ರಕರಣದ ಬಗ್ಗೆ ಏನೂ ಸಹ ನೆನಪಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.27-09-2015 ರಂದು ಸಂಜೆ 5 ಗಂಟೆ ಸಮಯದಲ್ಲಿ ನಿಮ್ಮನ್ನು ನೋಡಲು ನಿಮ್ಮ ಮೊದಲನೇ ಮಗನಾದ ನಾಗರಾಜು ಮತ್ತು ಆತನ ಹೆಂಡತಿ ಮಂಜುಳರವರು ಊರಿಗೆ ಬಂದಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅವರು ತಂದಿದ್ದ ಕಾರನ್ನು ಚಾಸಾ-1 ರವರ ಮನೆಯ ಹಿಂಭಾಗದಲ್ಲಿ ಇರುವ ಜಾಗದಲ್ಲಿ ನಿಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-

2015 ರಂದು ಬೆಳಗ್ಗೆ 10.30 ರ ಸಮಯದಲ್ಲಿ ನಿಮ್ಮ ಮಗ ಮತ್ತು ಸೊಸೆ ವಾಪಸ್ಸು ಬೆಂಗಳೂರಿಗೆ ಹೋಗಲು ಕಾರನ್ನು ತೆಗೆಯುತ್ತಿದ್ದಾಗ , 1 ನೇ ಆರೋಪಿಯು ಏಕಾ ಏಕಿ ಬಂದು ನಿಮಗೆ, ಚಾಸಾ-1 ಮತ್ತು 3, ನಾಗರಾಜು ಮತ್ತು ನಿಮ್ಮ ಸೊಸೆಗೆ ಏಕೆ ತಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಜಗಳ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ದಿನ ಸಂಜೆ 7 ಗಂಟೆ ಸಮಯದಲ್ಲಿ ನೀವು ಮತ್ತು ಚಾಸಾ-3 ರವರು ಇಬ್ಬರೇ ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ನಿಮ್ಮ ಮನೆಯ ಬಳಿ ಬಂದರು ಮತ್ತು 2 ನೇ ಆರೋಪಿಯು ನಿನ್ನ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದರು ನಿಮ್ಮ ಅಪ್ಪಾನದಾ ಜಾಗವೆಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ನಿಮ್ಮನ್ನು ಸಾಯಿಸಿ ಬಿಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ನೀವು ಫೋನ್ ಮಾಡಿ ತಿಳಿಸಿರುತ್ತೀರಾ ಮತ್ತು ಅದರ ಬಗ್ಗೆ ದೂರನ್ನು ನೀಡಲು ದಿ.29-09-2015 ರಂದು ಚಾಸಾ-1 ರವರು ಠಾಣೆಗೆ ಹೋಗಿದ್ದು, ನಂತರ ಚಾಸಾ-1 ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಚಾಸಾ-1 ರವರನ್ನು ಅಡ್ಡಗಟ್ಟಿದ್ದು, 1 ನೇ ಆರೋಪಿಯು ಚಾಸಾ-1 ರವರ ಎಡಗೈಗೆ ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಠಾಣೆಯಲ್ಲಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಿ ಕಳುಹಿಸಿದ್ದು, ನೀವು, ಚಾಸಾ-1 ಮತ್ತು 3 ರವರು ವಾಪಸ್ಸು ಮನೆಗೆ ಹೋಗುವಾಗ ಪುನಃ 1 ನೇ ಆರೋಪಿಯು ಗಲಾಟೆ ಮಾಡಿದ್ದು, 2 ಮತ್ತು 7 ನೇ ಆರೋಪಿಗಳು ನಿಮಗೂ ಮತ್ತು ಚಾಸಾ-3 ರವರಿಗೆ ಕೈಗಳಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯದಿಂದ ಚಾಸಾ-1 ರವರು ಸುಮುಖ್ ಕ್ಲೀನಿಕ್ ನಲ್ಲಿ ಹೊರರೋಗಿಯಾಗಿ ಚಿಕಿತ್ಸೆಯನ್ನು

ಪಡೆದುಕೊಂಡಿದ್ದರು ಮತ್ತು ನೀವು ಮತ್ತು ಚಾಸಾ-3 ರವರು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ.02-02-2021 ರಂದು ಪೋಲೀಸರಿಗೆ ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ 3 ಮತ್ತು 6 ನೇ ಆರೋಪಿಗಳು ಹಾಜರಿದ್ದಾರೆ. ಉಳಿದ ಆರೋಪಿಗಳು ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಸದರಿ ಪ್ರಕರಣವು ನಡೆದು ಸುಮಾರು 4 ವರ್ಷ ಆಗಿರುವ ಕಾರಣದಿಂದ ನೀವು ಈ ಮೇಲೆ ಹೇಳಿರುವ ವಿಷಯವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಲು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ.ಆರ್, ವಕೀಲರಿಂದ:**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ದಿನಾಂಕದಂದು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ನೀಡಿರುವ ಹೇಳಿಕೆಯ ಬಗ್ಗೆ ನನಗೆ ಮಾಹಿತಿ ಇದೆ. ಚಾಸಾ-1 ರವರು ನಿಮ್ಮ ಮಗನಾಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಇಂದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ನಮ್ಮ ಹಳೆಯ ಸಂಬಂಧಿಕರು ಆಗಿರುತ್ತಾರೆ. ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಸಿವಿಲ್ ವ್ಯಾಜ್ಯ ಇರುವುದಿಲ್ಲ. ಓ. ಎಸ್. ಸಂ. 174/2007 ರಂತೆ ನಿಮ್ಮ ಮತ್ತು ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯವು ಇತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾವೆಯು ಆರೋಪಿಗಳ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.27-09-2015 ರಂದು ನಿಮ್ಮ ಮತ್ತು ಸೊಸೆ ಕಾರಿನಲ್ಲಿ ನಿಮ್ಮ ಊರಿಗೆ ಬಂದಿರುವುದಿಲ್ಲ ಮತ್ತು ಈ ಹಿಂದೆ ನಿಮ್ಮ ಮತ್ತು ಆರೋಪಿಗಳ ನಡುವೆ

ಸಿವಿಲ್ ವ್ಯಾಜ್ಯವು ಇದ್ದ ಕಾರಣ ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಮಗ ಮತ್ತು ಸೊಸೆ ಯಾವ ದಿನಾಂಕ ಮತ್ತು ಸಮಯದೊಂದು ನಮ್ಮ ಮನೆಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ನನ್ನ ಮನೆಯ ಹಿಂದೆ ಇರುವ ಜಾಗದ ಸರ್ವೆ ನಂಬರ್ ಆದ 18 ರಲ್ಲಿ ಅವರ ಕಾರನ್ನು ನಿಲ್ಲಿಸಿದ್ದರು. ನೀವು ನಿಮ್ಮ ಹೇಳಿಕೆಯಲ್ಲಿ ಊರಿನ ಆಚೆ ವಾಸಿಸುತ್ತಿದ್ದೀರಾ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ತಮ್ಮ ಮನೆ ಹೊಲದ ಹತ್ತಿರ ಇದೆ ಮತ್ತು ಅಲ್ಲಿಯೇ ಗಲಾಟೆ ನಡೆಯಿತು ಎನ್ನುತ್ತಾರೆ. ಸದರಿ ಗಲಾಟೆಯು ಸಂಜೆ 6 ಗಂಟೆ ಸಮಯದಲ್ಲಿ ಆಗಿರುತ್ತದೆ. ನಿಮ್ಮ ಹೇಳಿಕೆಯಲ್ಲಿ ನೀವು ಬೇರೆ ಸಮಯವನ್ನು ಹೇಳಿರುತ್ತೀರಾ, ಆಗಾಗಿ ಯಾವುದೇ ಗಲಾಟೆಯು ನಡೆದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ಗಲಾಟೆ ನಡೆಯುವ ಸಮಯದಲ್ಲಿ ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಸಹ ಇರಲಿಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನೀವು ಮತ್ತು ಚಾಸಾ-3 ರವರು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವ ಬಗ್ಗೆ ನೀವು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಚಾಸಾ-1 ರವರ ಬಳಿ ಕೇಳಬೇಕು ಎನ್ನುತ್ತಾರೆ. ನೀವು ಮತ್ತು ಆರೋಪಿಗಳು ಠಾಣೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ರಾಜಿ ಸಂದಾನ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ಯಾರೂ ನಿಮ್ಮ ಊರಿನಲ್ಲಿ ವಾಸ ಮಾಡುತ್ತಿರುವುದಿಲ್ಲ ಮತ್ತು 2, 4, 6 ರಿಂದ 8 ನೇ ಆರೋಪಿಗಳು ಮದುವೆಯನ್ನು ಮಾಡಿಕೊಂಡು ಅವರ ಗಂಡನ ಮನೆಯಲ್ಲಿ ವಾಸಿಸುತ್ತಿರುವ

ಕಾರಣ ಆರೋಪಿಗಳು ನಿಮ್ಮ ಜೊತೆಯಲ್ಲಿ ಯಾವುದೇ ಗಲಾಟೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಹೇಳಿಕೆ ಮತ್ತು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -3032/2021**
**ಚಾಸಾ - 03 / ಪ್ರಾಸಾ - 03**

| | |
|---|---|
| ಹೆಸರು | **ಪುಟ್ಟಮ್ಮ** |
| ಗಂಡನ ಹೆಸರು | **ಗಿರಿಯಪ್ಪ** |
| ವಯಸ್ಸು | **70** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಮೇಟಿಪಾಳ್ಯ** |

**ದಿನಾಂಕಃ20-03-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಚಾಸಾ-1 ರವರು ನನ್ನ ಮಗ. ಚಾಸಾ-2 ರವರು ನನ್ನ ಯಜಮಾನರು. ಆರೋಪಿಗಳು ನಮ್ಮ ಊರಿನವರು. ನನಗೆ ಈ ಪ್ರಕರಣದ ಬಗ್ಗೆ ಏನೂ ಸಹ ನೆನಪಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.27-09-2015 ರಂದು ಸಂಜೆ 5 ಗಂಟೆ ಸಮಯದಲ್ಲಿ ನಿಮ್ಮನ್ನು ನೋಡಲು ನಿಮ್ಮ ಮೊದಲನೇ ಮಗನಾದ ನಾಗರಾಜು ಮತ್ತು ಆತನ ಹೆಂಡತಿ ಮಂಜುಳರವರು ಊರಿಗೆ ಬಂದಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅವರು ತಂದಿದ್ದ ಕಾರನ್ನು ಚಾಸಾ-1 ರವರ ಮನೆಯ ಹಿಂಭಾಗದಲ್ಲಿ ಇರುವ ಜಾಗದಲ್ಲಿ ನಿಲ್ಲಿಸಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.28-09-

2015 ರಂದು ಬೆಳಗ್ಗೆ 10.30 ರ ಸಮಯದಲ್ಲಿ ನಿಮ್ಮ ಮಗ ಮತ್ತು ಸೊಸೆ ವಾಪಸ್ಸು ಬೆಂಗಳೂರಿಗೆ ಹೋಗಲು ಕಾರನ್ನು ತೆಗೆಯುತ್ತಿದ್ದಾಗ , 1 ನೇ ಆರೋಪಿಯು ಏಕಾ ಏಕಿ ಬಂದು ನಿಮಗೆ, ಚಾಸಾ-1 ಮತ್ತು 2, ನಾಗರಾಜು ಮತ್ತು ನಿಮ್ಮ ಸೊಸೆಗೆ ಏಕೆ ತಮ್ಮ ಹೊಲದಲ್ಲಿ ಕಾರನ್ನು ನಿಲ್ಲಿಸಿದ್ದೀರಾ ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಜಗಳ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದೇ ದಿನ ಸಂಜೆ 7 ಗಂಟೆ ಸಮಯದಲ್ಲಿ ನೀವು ಮತ್ತು ಚಾಸಾ-2 ರವರು ಇಬ್ಬರೇ ಮನೆಯ ಮುಂದೆ ನಿಂತಿದ್ದಾಗ ಆರೋಪಿಗಳು ನಿಮ್ಮ ಮನೆಯ ಬಳಿ ಬಂದರು ಮತ್ತು 2 ನೇ ಆರೋಪಿಯು ನಿನ್ನ ಮಕ್ಕಳು ಏಕೆ ಕಾರನ್ನು ತಮ್ಮ ಜಾಗದಲ್ಲಿ ನಿಲ್ಲಿಸಿದ್ದರು ನಿಮ್ಮ ಅಪ್ಪಾನದಾ ಜಾಗವೆಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಹೊಡೆದು ಇನ್ನೊಂದು ಸಾರಿ ತಮ್ಮ ತಂಟೆಗೆ ಬಂದರೆ ನಿಮ್ಮನ್ನು ಸಾಯಿಸಿ ಬಿಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ನೀವು ಫೋನ್ ಮಾಡಿ ತಿಳಿಸಿರುತ್ತೀರಾ ಮತ್ತು ಅದರ ಬಗ್ಗೆ ದೂರನ್ನು ನೀಡಲು ದಿ.29-09-2015 ರಂದು ಚಾಸಾ-1 ರವರು ಠಾಣೆಗೆ ಹೋಗಿದ್ದು, ನಂತರ ಚಾಸಾ-1 ರವರು ಹೊಲದ ದಾಖಲೆಗಳನ್ನು ತೆಗೆದುಕೊಂಡು ಬರಲು ಮನೆಯ ಬಳಿ ಹೋದಾಗ ಆರೋಪಿಗಳು ಚಾಸಾ-1 ರವರನ್ನು ಅಡ್ಡಗಟ್ಟಿದ್ದು, 1 ನೇಆರೋಪಿಯು ಚಾಸಾ-1 ರವರ ಎಡಗೈಗೆ ಕೈಗಳಿಂದ ಹೊಡೆದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಂತರ ಠಾಣೆಯಲ್ಲಿ ಇಬ್ಬರಿಗೂ ಬುದ್ದಿವಾದ ಹೇಳಿ ತೀರ್ಮಾನ ಮಾಡಿ ಕಳುಹಿಸಿದ್ದು, ನೀವು, ಚಾಸಾ-1 ಮತ್ತು 2 ರವರು ವಾಪಸ್ಸು ಮನೆಗೆ ಹೋಗುವಾಗ ಪುನಃ 1 ನೇ ಆರೋಪಿಯು ಗಲಾಟೆ ಮಾಡಿದ್ದು, 2 ಮತ್ತು 7 ನೇ ಆರೋಪಿಗಳು ನಿಮಗೂ ಮತ್ತು ಚಾಸಾ-3 ರವರಿಗೆ ಕೈಗಳಿಂದ ಹೊಡೆದು, ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಕೃತ್ಯದಿಂದ ಚಾಸಾ-1 ರವರು ಸುಮುಖ್ ಕ್ಲೀನಿಕ್ ನಲ್ಲಿ ಹೊರರೋಗಿಯಾಗಿ ಚಿಕಿತ್ಸೆಯನ್ನು

ಪಡೆದುಕೊಂಡಿದ್ದರು ಮತ್ತು ನೀವು ಮತ್ತು ಚಾಸಾ-2 ರವರು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನೀವು ದಿ.02-02-2021 ರಂದು ಪೋಲೀಸರಿಗೆ ನಿಮ್ಮ ಹೇಳಿಕೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ 3 ಮತ್ತು 6 ನೇ ಆರೋಪಿಗಳು ಹಾಜರಿದ್ದಾರೆ. ಉಳಿದ ಆರೋಪಿಗಳು ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ. ಸದರಿ ಪ್ರಕರಣವು ನಡೆದು ಸುಮಾರು 4 ವರ್ಷ ಆಗಿರುವ ಕಾರಣದಿಂದ ನೀವು ಈ ಮೇಲೆ ಹೇಳಿರುವ ವಿಷಯವನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಲು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಬಿ. ಇ.ಆರ್, ವಕೀಲರಿಂದ:**

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವ ದಿನಾಂಕದಂದು ಪೋಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ನೀಡಿರುವ ಹೇಳಿಕೆಯ ಬಗ್ಗೆ ನನಗೆ ಮಾಹಿತಿ ಇದೆ. ಚಾಸಾ-1 ರವರು ನಿಮ್ಮ ಮಗನಾಗಿರುವ ಕಾರಣದಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಇಂದು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆರೋಪಿಗಳು ನಮ್ಮ ಹಳೆಯ ಸಂಬಂಧಿಕರು ಆಗಿರುತ್ತಾರೆ. ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಸಿವಿಲ್ ವ್ಯಾಜ್ಯ ಇರುವುದಿಲ್ಲ. ಓ. ಎಸ್. ಸಂ. 174/2007 ರಂತೆ ನಿಮ್ಮ ಮತ್ತು ಆರೋಪಿಗಳ ನಡುವೆ ಸಿವಿಲ್ ವ್ಯಾಜ್ಯವು ಇತ್ತು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ದಾವೆಯು ಆರೋಪಿಗಳ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.27-09-2015 ರಂದು ನಿಮ್ಮ ಮತ್ತು ಸೊಸೆ ಕಾರಿನಲ್ಲಿ ನಿಮ್ಮ ಊರಿಗೆ ಬಂದಿರುವುದಿಲ್ಲ ಮತ್ತು ಈ ಹಿಂದೆ ನಿಮ್ಮ ಮತ್ತು ಆರೋಪಿಗಳ ನಡುವೆ

ಸಿವಿಲ್ ವ್ಯಾಜ್ಯವು ಇದ್ದ ಕಾರಣ ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನನ್ನ ಮಗ ಮತ್ತು ಸೊಸೆ ಯಾವ ದಿನಾಂಕ ಮತ್ತು ಸಮಯದೊಂದು ನಮ್ಮ ಮನೆಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಮಗ ನನ್ನ ಮನೆಯ ಹಿಂದೆ ಇರುವ ಜಾಗದ ಸರ್ವೆ ನಂಬರ್ ಆದ 18 ರಲ್ಲಿ ಅವರ ಕಾರನ್ನು ನಿಲ್ಲಿಸಿದ್ದರು. ನೀವು ನಿಮ್ಮ ಹೇಳಿಕೆಯಲ್ಲಿ ಊರಿನ ಆಚೆ ವಾಸಿಸುತ್ತಿದ್ದೀರಾ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ತಮ್ಮ ಮನೆ ಹೊಲದ ಹತ್ತಿರ ಇದೆ ಮತ್ತು ಅಲ್ಲಿಯೇ ಗಲಾಟೆ ನಡೆಯಿತು ಎನ್ನುತ್ತಾರೆ. ಸದರಿ ಗಲಾಟೆಯು ಸಂಜೆ 6 ಗಂಟೆ ಸಮಯದಲ್ಲಿ ಆಗಿರುತ್ತದೆ. ನಿಮ್ಮ ಹೇಳಿಕೆಯಲ್ಲಿ ನೀವು ಬೇರೆ ಸಮಯವನ್ನು ಹೇಳಿರುತ್ತೀರಾ, ಆಗಾಗಿ ಯಾವುದೇ ಗಲಾಟೆಯು ನಡೆದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ಗಲಾಟೆ ನಡೆಯುವ ಸಮಯದಲ್ಲಿ ನಮ್ಮನ್ನು ಹೊರತುಪಡಿಸಿ ಬೇರೆ ಯಾರೂ ಸಹ ಇರಲಿಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನೀವು ಮತ್ತು ಚಾಸಾ-3 ರವರು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಚಾಸಾ-1 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುವ ಬಗ್ಗೆ ನೀವು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಚಾಸಾ-1 ರವರ ಬಳಿ ಕೇಳಬೇಕು ಎನ್ನುತ್ತಾರೆ. ನೀವು ಮತ್ತು ಆರೋಪಿಗಳು ಠಾಣೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ರಾಜಿ ಸಂಧಾನ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳು ಯಾರೂ ನಿಮ್ಮ ಊರಿನಲ್ಲಿ ವಾಸ ಮಾಡುತ್ತಿರುವುದಿಲ್ಲ ಮತ್ತು 2, 4, 6 ರಿಂದ 8 ನೇ ಆರೋಪಿಗಳು ಮದುವೆಯನ್ನು ಮಾಡಿಕೊಂಡು ಅವರ ಗಂಡನ ಮನೆಯಲ್ಲಿ ವಾಸಿಸುತ್ತಿರುವ

ಕಾರಣ ಆರೋಪಿಗಳು ನಿಮ್ಮ ಜೊತೆಯಲ್ಲಿ ಯಾವುದೇ ಗಲಾಟೆಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಗಳಿಗೆ ತೊಂದರೆಯನ್ನು ಕೊಡಬೇಕು ಎಂಬ ಉದ್ದೇಶದಿಂದ ಸುಳ್ಳು ಹೇಳಿಕೆ ಮತ್ತು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**